This Article has been Dedicated to All Kannadigas.

17-Feb-08
Mallenahalli Pages
Sunil Mallenahalli
sunilkumara.ms@gmail.com

## ಕನ್ನಡಿಗನಿಂದ ಕನ್ನಡಿಗರಿಗಾಗಿ ಅರ್ಪಣೆ

ಕನ್ನಡಿಗನಿಂದ ಕನ್ನಡಿಗರಿಗೋಸ್ಕರ ಬರೆದ ಲೇಖನವಿದು, ಓದುವ ತಾಳ್ಮೆ ಇರುವ ಮನ ನಿಮ್ಮದಲ್ಲವೇ?

ಕನ್ನಡಿಗರೇ.........

ಏನ್ರೀ, ಎಲ್ಲಿ ಹೋದ್ರಿ? ನಿದ್ರೆ ಮಾಡುತ್ತಿರುವಿರಾ? ಏಳ್ರಿ ಎದ್ದ್‌ಬನ್ರಿ. ನಿಮ್ಮ ತನು, ಮನ, ಧನಗಳೆಲ್ಲವನ್ನೂ "ಅನ್ಯರು" ದೋಚುತ್ತಿರುವುದನ್ನು ನೋಡ್‌ಬನ್ರಿ. ಯಾಕ್ರಿ ಅವರಿಗೆ ಈ ಅವಕಾಶ ಕೊಟ್ರಿ?

ಅನ್ಯರನ್ನು ಪ್ರೀತಿಸುವುದ ಕಲಿಸಿದ ನಿಮ್ಮ ತಾಯಿಯನ್ನು ಪೂಜಿಸುವುದ ಮರೆತುಬಿಟ್ಟಿರಾ? ನಿಮ್ಮ ದೊರೆ ಅಮೋಘವರ್ಷ ನೃಪತುಂಗನ ವೀರ ನುಡಿಗಳನ್ನು ಬಿರುಗಾಳಿಯಲ್ಲಿ ತೂರಿಬಿಟ್ಟಿರಾ? ನಿಮ್ಮ ಶೂರ ಸೇನಾನಿ ಮಯೂರವರ್ಮನ ಛಲದ ಗೀತೆಗೆ ಬೆಂಕಿಹಚ್ಚಿ ಮಂಗಳ ಆಡಿಬಿಟ್ಟಿರಾ? ಯಾಕ್ರಿ ಹಿಂಗಾಗಿ ಬಿಟ್ರಲ್ಲ? ಈ ಸಂಕಷ್ಟದ ಪರಿಸ್ಥಿತಿ ಕಂಡು ನಿಮಗೆ ಕಣ್ಣೀರು ಬಂದಿಲ್ಲವೇನ್ರಿ?

ನಿಮ್ಮದೇ ವಿಮಾನ ನಿಲ್ದಾಣದಲ್ಲಿ ಕೆಲಸ ದೊರಕಿಸಿಕೊಳ್ಳಲು, ಸಾರ್ ನಮ್ಮ ನಿಲ್ದಾಣವದು ನಮಗೆ ಕೆಲಸ ಕೊಡ್ರಿ ಸಾರ್ ಎಂದು ವಿನಮ್ರಭಾವದ ಕೋರಿಕೆ ಪತ್ರವನ್ನು ಬರೆಯುವ ಪರಿಸ್ಥಿತಿ ನಿಮ್ಮದಾಗೋಯಿತ್ತಲ್ರಿ, ನಿಮ್ಮನ್ನು ಕೊಳಕು ಜನಗಳೆಂದರೂ ಸುಮ್ಮನಿರುವಿರಲ್ರಿ, ನಿಮ್ಮೆಲ್ಲರ ನೆಚ್ಚಿನ ತಿರುಮಲ, ತಿರುಪತಿಯಲ್ಲೇ ಆಗಲಿ, ಪಕ್ಕದ ಹೊಸೂರಿನ ಚೆಕ್ ಪೋಸ್ಟ್‌ನಲ್ಲೇ ಆಗಲಿ ಅಥವಾ ಇನ್ನೆಲ್ಲೇ ಆಗಲಿ ತುಂಬಾ ಕಡೆ ಕನ್ನಡ ಪದಗಳನ್ನು ಅವರ ಮನಸ್ಸಿಗೆ ಬಂದ ಹಾಗೆ ತಪ್ಪಾಗಿ ಬರೆದಿದ್ದರೂ ತಲೆ ಕೆಡಿಸಿಕೊಳ್ಳುವ ಜಾಯಮಾನ ನಿಮ್ಮದಲ್ಲವಲ್ರಿ, ಮನೊರಮಾ ಇಯರ್ ಬುಕ್‌ನಲ್ಲಿ ಕನ್ನಡದ ಬಗ್ಗೆ, ಕನ್ನಡ ಚಿತ್ರರಂಗದ ಬಗ್ಗೆ, ವರನಟ ರಾಜ್ ಅವರ ಬಗ್ಗೆ ತಪ್ಪಾಗಿ ಅಚ್ಚೊತ್ತಿದ್ದರೂ ಶಾಂತಚಿತ್ತರಾಗಿರುವಿರಲ್ಲ? ಏನ್ರಿ ನಿಮ್ಮ ಕರುನಾಡಲ್ಲಿ ಬೇರೆ ಭಾಷೆಗಳನ್ನು ತಪ್ಪಾಗಿ ಬರೆದಿರುವುದನ್ನು ನೀವು ಎಲ್ಲಿಯಾದರೂ ನೋಡಿರುವಿರಾ? ನಮ್ಮ ರಾಜ್ಯದಲ್ಲೇ ಸಾವಿರಾರು ಮಹಾಲಕ್ಷ್ಮಿಯರು ತಾಯಸೇವೆ ಮಾಡಲು ಸಿದ್ಧರಿರುವಾಗ ಅಪರಿಮಿತ ರಾಜಕೀಯ ಬಲವಿರುವ ನೆರೆಯ ರಾಜ್ಯದ ರಾಜಲಕ್ಷ್ಮಿನೇ ಬೇಕೆಂದು ಪಣತೊಟ್ಟಿರುವ ಸಖತ್ ಸನ್ಮಾನ್ಯ ರಾಜ್ಯಪಾಲರಿಗೆ ಸರಿಯಾದ ಬುದ್ಧಿಪಾಠ ಕಲಿಸದೆ ಬಿಟ್ಟಿರಲ್ಲ. ನಿಮ್ಮ ಭವಿಷ್ಯಕ್ಕೆ ಹೊಗೆ ಹಾಕುವ ಕೆಲಸ ಮಾಡ್ತಾ ಇದ್ದಾರಲ್ರಿ ಹೊಗೇನಕಲ್‌ನಲ್ಲಿ ನೋಡ್ತಾ ಸುಮ್ಮನೆ ಕುಳಿತುಬಿಟ್ಟಿದ್ದಿರಲ್ರಿ.

ಮೆಚ್ಚಬೇಕ್ ಕಣ್ರಿ ನಿಮ್ಮ ವಿಶಾಲವಾದ ಮನೋಭಾವಾನ. ಹುಷಾರ್ರೀ, ನಿಮ್ಮ ಶಾಂತತೆ ಹೀಗೆಯೇ ಮುಂದುವರೆದರೆ, ನೀವು ದೇವ್ರು ಆಗ್ಬಿಡ್ತೀರಾ. ದೇವರೇನು ಕೇಳೋದಿಲ್ಲ ಎಂದುಕೊಂಡು ದೇವರಾದ ನಿಮ್ಮನ್ನು ಗಣೇಶನನ್ನು ನೀರಿಗೆ ಬಿಡುವಂತೆ ಅರಬ್ಬಿ ಸಮುದ್ರಕ್ಕೋ..ಬಂಗಾಳ ಕೊಲ್ಲಿಗೋ ನೂಕುವ ಕಾಲವೇನು ದೂರವಿಲ್ಲ ಕಣ್ರಿ!

ಅಬ್ಬಾ! ಇನ್ನೂ ನಮ್ಮ ಸಂಸದರ ಬಗ್ಗೆ ಹೇಳ್ಬೇಕೂಂದ್ರೆ ಅವರೆಲ್ಲ ಮನುಷ್ಯರಲ್ಲರೀ ಎಂಥಾ! ಪುಣ್ಯಾತ್ಮರು ಅವರು ಗೊತ್ತಾ? ಅವರಿಗೆ ನೀವೇನಾದ್ರೂ ಒಂದು ಸಲ ಕೈಮುಗಿದರೆ ಕನಿಷ್ಟ ಪಕ್ಷ ನೂರು ಜನ್ಮದ ಪಾಪ ನಿಮಗೆ ಬರುತ್ತೆ ಕಣ್ರೀ!
ಕನ್ನಡಕ್ಕೆ ಸರಿಯಾದ ಸ್ಥಾನಮಾನ ನೀಡಿ ಎಂದು ಕೇಳಲು ಹೋದ ಸಂಸದರು ಕೇವಲ ಹದಿನಾಲ್ಕು ಮಂದಿಯಂತೆ, ಇನ್ನುಳಿದ ಮಹಾನುಭಾವರಿಗೆ ಸಂಸತ್ತು ಅಂದ್ರೇನೇ ಅಲರ್ಜಿಯಂತೆ ಮಳೆಗಾಲ, ಚಳಿಗಾಲ ಹಾಗೂ ಬೇಸಿಗೆಕಾಲಕ್ಕೆ ಒಂದೊಂದು ಸಲ ಮಾತ್ರ ಸಂಸತ್ತಿಗೆ ಹೋಗುವರಂತೆ. ಆ ಒಂದೊಂದು ಸಲದಲ್ಲೂ ಅಲ್ಲೇ ಸದನದಲ್ಲೇ ಮೂರನಾಲ್ಕು ಗಂಟೆ ಹಾಯಾಗಿ ನಿದ್ರೆ ಮಾಡಿ ಬರುವರಂತೆ. ಅಂಥ ಬಾಳಿಗೆ ಯಾಕ್ರಿ ಅವರು ಎಂ.ಪಿ. ಗಳಾಗ್ಬೇಕಿತ್ತು?

ನೋಡ್ಬನ್ರಿ ಅಲ್ಲಿ ನಿಮ್ಮ ದೇವನಹಳ್ಳಿಯಲ್ಲಿ, ನಿಮ್ಮ ರೈತ ಸಹೋದರಿಗೆ ಮೂರು ಕಣ್ಣುಳ್ಳ ಚಿಪ್ಪನ್ನು ಕೊಟ್ಟು ಅವರ ಜಾಗದಲ್ಲಿ ಧರೆಯ ಹಿರಿಮೆಯನ್ನು ಜಗತ್ತಿಗೆಲ್ಲಾ ಸಾರುವಂತಹ ಭವ್ಯವಾದ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ನಿರ್ಮಿಸುತ್ತಿರುವರು ಅಲ್ಲಿ. ನಿಮ್ಮನ್ನು ಬಿಟ್ಟು ಎಲ್ಲರಿಗೂ ಎಲ್ಲ ವಿಧವಾದ ಅವಕಾಶವಿರುವುದಲ್ಲಿ.
ಅಲ್ರೀ, ನಮ್ಮ ನೆಲದಲ್ಲಿ ಕಟ್ಟುತ್ತಿರುವ ವಿಮಾನ ನಿಲ್ದಾಣಕ್ಕೆ "Bengaluru International Airport" ಎಂದು ಹೆಸರಿಡಬೇಕೆಂದುಕೊಂಡಿದ್ದೇವೆ ಅಂತಾ ಹೇಳ್ತಾ ಇದ್ದಾರಲ್ರಿ. ನಮ್ಮೂರ Airportಗೆ ನಮ್ಮೂರಿನ ಹೆಸರಿಡಲು ಯಾವ ದೊಣ್ಣೆ ನಾಯಕನ ಅಪ್ಪಣೆ ಬೇಕು ನೀವೇ ಹೇಳಿ? ಸಹೋದರರೆ ಇನ್ನು ಹೆಚ್ಚೆಚ್ಚು ಬರೆವ ಆಸೆ, ಅದ್ರೆ ಏನ್ಮಾಡೋದ್ರಿ ಕಾಲಚಕ್ರವದು ಯಾವಾಗಲೂ ನಮಗಾಗಿ ಬಿಡುವು ಕೊಡದು ಅದ್ದರಿಂದ ಸದ್ಯಕ್ಕೆ ತಾತ್ಕಾಲಿಕ ವಿರಾಮ ಇರಿಸಿರುತ್ತೇನೆ. ಮುಂದಿನ ಲೇಖನದಲ್ಲಿ ಮತ್ತೆ ವಿಚಾರ ಮಾಡೋಣಾ. ಇಷ್ಟು ಹೊತ್ತು ತಾಳ್ಮೆಯಿಂದ ಕಳಿತು ಓದಿರುವ ನಿಮಗೆ ನನ್ನ ಅನಂತ ವಂದನೆಗಳು.

ನನ್ನ ಈ ಲೇಖನದಲ್ಲಿ ಉದ್ಧಟತನದ ಮಾತುಗಳಿವೆ ಎಂದು ನಿಮಗನಿಸಿದರೆ ದಯವಿಟ್ಟು ಕ್ಷಮಿಸಿ. ಈ ಲೇಖನದ ಕಿಚ್ಚಿನ ನುಡಿಗಳು ನಿಮಗಿರಲಿ. ತನು ತುಂಬಿದ ನಿಮ್ಮ ಅಭಿಪ್ರಾಯದ ನುಡಿಗಳು ನನಗಿರಲಿ.

ಇಂತಿ ನಿಮ್ಮ
ಸುನಿಲ್ ಮಲ್ಲೇನಹಳ್ಳಿ
sunilkumara.ms@gmail.com